ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1054
ಸದಸ್ಯರ ಹೆಸರು	:	ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರ ಕ್ಷೇತ್ರ)
ಉತ್ತರಿಸುವ ದಿನಾಂಕ	:	22-12-2021.
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

<table>
<tr><th>ಪ್ರ..
ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಬೆಂಗಳೂರು--ಮೈಸೂರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯು ಆರಂಭಗೊಂಡಿದ್ದು ಯಾವಾಗ;</td><td>ರಾಷ್ಟ್ರೀಯ ಹೆದ್ದಾರಿ-275 ಬೆಂಗಳೂರಿನಿಂದ ಮೈಸೂರು ವರೆಗಿನ ರಸ್ತೆ ಕಾಮಗಾರಿಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಹಾಗೂ ಈ ಕೆಳಕಂಡಂತೆ ವರದಿಸಿರುತ್ತಾರೆ.

ಈ ಕಾಮಗಾರಿಯನ್ನು 2 ಪ್ಯಾಕೇಜ್ ಗಳನ್ನಾಗಿ ವಿಂಗಡಿಸಿ Hybrid Annuity Mode (HAM) ಅಡಿಯಲ್ಲಿ ಕೈಗೊಳ್ಳಲಾಗುತ್ತಿದೆ

ಪ್ಯಾಕೇಜ್-1: ರಾಷ್ಟ್ರೀಯ ಹೆದ್ದಾರಿ -275ರ ಬೆಂಗಳೂರಿನಿಂದ ನಿಡಘಟ್ಟ ವರೆಗೆ 6 ಪಥದ ರಸ್ತೆ ಹಾಗೂ 2 ಬದಿಯಲ್ಲಿ 2 ಪಥದ ಸರ್ವೀಸ್ ರಸ್ತೆ ಒಳಗೊಂಡಂತೆ ಒಟ್ಟು 56.200 ಕಿ.ಮೀ. ಉದ್ದದ ರಸ್ತೆಯ ಕಾಮಗಾರಿಯನ್ನು ದಿನಾಂಕ: 14.05.2019 ರಂದು ಪ್ರಾರಂಭಿಸಲಾಗಿರುತ್ತದೆ.

ಪ್ಯಾಕೇಜ್-2: ರಾಷ್ಟ್ರೀಯ ಹೆದ್ದಾರಿ-275ರ ನಿಡಘಟ್ಟದಿಂದ ಮೈಸೂರುವರೆಗೆ 6 ಪಥದ ರಸ್ತೆ ಹಾಗೂ 2 ಬದಿಯಲ್ಲಿ 2 ಪಥದ ಸರ್ವೀಸ್ ರಸ್ತೆ ಒಳಗೊಂಡಂತೆ ಕಿ.ಮೀ.74.20 ರಿಂದ ಕಿ.ಮೀ.134.304 ಒಟ್ಟು 61.104.ಕಿ.ಮೀ ಉದ್ದದ ರಸ್ತೆಯ ಕಾಮಗಾರಿಯನ್ನು ದಿನಾಂಕ:10.12.2019 ರಂದು ಪ್ರಾರಂಭಿಸಲಾಗಿದೆ.</td></tr>
<tr><td>ಆ.</td><td>ಸದರಿ ಕಾಮಗಾರಿಯು ಅಂದಾಜು ಮೊತ್ತ ಎಷ್ಟು; ಟೆಂಡರ್ ಪಡೆದ ಸಂಸ್ಥೆ ಯಾವುದು; (ವಿವರ ನೀಡುವುದು)</td><td rowspan="3">ಪ್ಯಾಕೇಜ್-1: ರಾಷ್ಟ್ರೀಯ ಹೆದ್ದಾರಿ-275ರ ಬೆಂಗಳೂರಿನಿಂದ ನಿಡಘಟ್ಟವರೆಗೆ 6 ಪಥದ ರಸ್ತೆ ಹಾಗೂ 2 ಬದಿಯಲ್ಲಿ 2 ಪಥದ ಸರ್ವೀಸ್ ರಸ್ತೆ ಒಳಗೊಂಡಂತೆ ಒಟ್ಟು ಕಿ.ಮೀ.56.200 ಉದ್ದದ ರಸ್ತೆಯ ಕಾಮಗಾರಿ ಯೋಜನೆಯ ಒಟ್ಟು ವೆಚ್ಚ ರೂ.3501.00 ಕೋಟಿಗಳ ಮೊತ್ತವಾಗಿರುತ್ತದೆ. ಸದರಿ ಕಾಮಗಾರಿಯನ್ನು ಮೆ:ದಿಲೀಪ್ ಬಿಲ್ಡ್‌ಕಾನ್ ಲಿಮಿಟೆಡ್ ಇವರಿಗೆ ವಹಿಸಲಾಗಿರುತ್ತದೆ. ದಿನಾಂಕ:14.05.2019 ರಂದು ಕಾಮಗಾರಿಯನ್ನು ಪ್ರಾರಂಭಿಸಿ 30 ತಿಂಗಳುಗಳಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ. ಪ್ರಸ್ತುತ ಶೇ.85.31 ಭೌತಿಕವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಹಾಗೂ ದಿನಾಂಕ:02.05.2022 ವರೆಗೆ ವಿಸ್ತರಣೆಗೆ ಅನುಮೋದನೆ ದೊರೆತಿರುತ್ತದೆ.

ಪ್ಯಾಕೇಜ್-2: ರಾಷ್ಟ್ರೀಯ ಹೆದ್ದಾರಿ -275ರ ನಿಡಘಟ್ಟ ದಿಂದ ಮೈಸೂರು ವರೆಗೆ 6 ಪಥದ ರಸ್ತೆ ಹಾಗೂ 2 ಬದಿಯಲ್ಲಿ 2 ಪಥದ ಸರ್ವೀಸ್ ರಸ್ತೆ ಒಳಗೊಂಡಂತೆ ಕಿ.ಮೀ.74.20 ರಿಂದ ಕಿ.ಮೀ.134.304 ಒಟ್ಟು 61.104 ಕಿ.ಮೀ. ಉದ್ದದ ರಸ್ತೆಯ ಕಾಮಗಾರಿ ಯೋಜನೆಯ ಒಟ್ಟು ವೆಚ್ಚ ರೂ.3816.72 ಕೋಟಿಗಳ ಮೊತ್ತವಾಗಿರುತ್ತದೆ. ಸದರಿ ಕಾಮಗಾರಿಯನ್ನು ಮೆ: ದಿಲೀಪ್ ಬಿಲ್ಡ್‌ಕಾನ್ ಲಿಮಿಟೆಡ್ ಇವರಿಗೆ ದಿನಾಂಕ:29.02.2018 ರಂದು ಸ್ವೀಕೃತಿ ಪತ್ರ (LOA) ನೀಡಿರುತ್ತಾರೆ. ಸದರಿ ಕಾಮಗಾರಿಗೆ ದಿನಾಂಕ:10.12.2019 ರಂದು ಪ್ರಾರಂಭಗೊಂಡು, 30 ತಿಂಗಳುಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಪ್ರಸ್ತುತ ಶೇ.80.30</td></tr>
<tr><td>ಇ.</td><td>ಇದನ್ನು ಎಷ್ಟು ಪಥದ ರಸ್ತೆಯನ್ನಾಗಿ ಮಾಡಲಾಗುತ್ತಿದೆ; (ವಿವರ ನೀಡುವುದು)</td></tr>
<tr><td>ಈ.</td><td>ಈ ರಸ್ತೆ ಕಾಮಗಾರಿಯು ಪೂರ್ಣಗೊಳ್ಳುವುದು ಯಾವಾಗ? (ವಿವರ ನಿಡುವುದು)</td></tr>
</table>

		ಭೌತಿಕವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಹಾಗೂ ದಿನಾಂಕ:07.09.2022 ವರೆಗೆ ವಿಸ್ತರಣೆಗೆ ಅನುಮೋದನೆ ದೊರೆತಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

ಕಡತ ಸಂಖ್ಯೆ: ಲೋಇ 346 ಸಿಎನ್‌ಹೆಚ್ 2021 (ಇ)

(ಸಿ.ಸಿ.ಪಾಟೀಲ)
ಲೋಕೋಪಯೋಗಿ ಸಚಿವರು